ಮಾಡುವುದು ಸರಿಯಲ್ಲ. ನಾವೇ ಖುದ್ದು ಸ್ವಂತ ಕೇಂದ್ರಗಳಲ್ಲಿ ಉತ್ಪಾದನೆ ಮಾಡಿದರೆ ದರಹೆಚ್ಚಿಗೆ ಬೀಳುತ್ತದೆ.

ಬೈಂದೂರಿನಲ್ಲಿ ವಿದ್ಯುತ್ ಸಬ್ ಸ್ಟೇಷನ್‌ನ ಸ್ಥಾಪನೆ

೧೬೦ (ಶಿಲ್ಕ್) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬೈಂದೂರಿಗೆ ಮಂಜೂರಾದ ವಿದ್ಯುತ್ ಸಬ್ ಸ್ಟೇಷನನ್ನು ಇನ್ನೂ ಸ್ಥಾಪಿಸದಿರಲು ಕಾರಣವೇನು ?

ಆ) ಹಾಗಿದ್ದಲ್ಲಿ ಎಂದಿನಿಂದ ಕಾರ್ಯಾರಂಭ ಮಾಡಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಬೈಂದೂರು ಸಬ್ ಸ್ಟೇಷನ್ ಮತ್ತು ಇದಕ್ಕೆ ಸಂಬಂಧಿಸಿದ ೩೩ ಕೆ. ವಿ. ಲೈನಿನ ಕೆಲಸ ಕೈಗೆತ್ತಿಕೊಳ್ಳಲಾಗಿದೆ.

ಆ) ಈ ಎರಡೂ ಕೆಲಸಗಳು ೧೯೬೯-೭೦ರಲ್ಲಿ ಮುಗಿದು ಸಬ್ ಸ್ಟೇಷನ್ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ಶ್ರೀ ಜಿ.ಎಸ್. ಆಚಾರ್.—ಅಧ್ಯಕ್ಷರೇ, ಕಳೆದವರ್ಷವೇ ಇದರ ಕಾರ್ಯಾರಂಭ ಮಾಡುತ್ತೇವೆಂದು ಮಾನ್ಯ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು. ದುರ್ದೈವ ಅಂದರೆ ಸಬ್ ಸ್ಟೇಷನ್ ಕಾರ್ಯಕ್ಕೆ ಬೇಕಾದ ಸೈಟು ಪಡೆಯಲಿಕ್ಕಾಗಿ ಸಂಬಂಧಪಟ್ಟ ಇಂಜಿನಿಯರ್, ಅಸಿಸ್ಟೆಂಟ್ ಕಮೀಷನರ್, ನಾವೆಲ್ಲ ಹೋಗಿ ಈ ಕೆಲಸವನ್ನು ಎಲ್ಲಿ ಎತ್ತಿಕೊಳ್ಳಬೇಕೆಂದು ನಿಗದಿ ಮಾಡಿದ್ದರೂ ಇನ್ನೂ ಕೆಲಸ ಆಗಿಲ್ಲ. ಇನ್ನೂ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ. ಇಲಾಖೆಯಲ್ಲಿ ಈ ಕೆಲಸ ಮಂದಗತಿಯಲ್ಲಿ ನಡೆಯುತ್ತಿದೆ. ಈ ಕೆಲಸ ೧೯೬೯-೭೦ರಲ್ಲಿ ಆಗುತ್ತದೆ ಎನ್ನುವುದು ಕಷ್ಟ. ಬೈಂದೂರು ವಿದ್ಯುಚ್ಛಕ್ತಿಗೆ ಸರಬರಾಜು ವಿಚಾರ ಕುರಿತು ತಪ್ಪಾಗಿ ಗೊತ್ತೇ ಇದೆ. ಆದ್ದರಿಂದ, ಆದಷ್ಟು ಬೇಗ ಈ ಕೆಲಸವನ್ನು ಪ್ರಾರಂಭ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಇದಕ್ಕೆ ಬೇಕಾಗತಕ್ಕ ಸಲಕರಣೆಗಳು ಮುಖ್ಯ. ಈ ಕೆಲಸ ಪ್ರಾರಂಭ ಮಾಡುವುದಕ್ಕೆ ವೈರ್ ಮತ್ತು ಕಂಬಗಳು ಮುಖ್ಯ. ಈಗ ವೈರ್ ಸ್ಟಾಕ್ ಇದೆ. ಕಂಬಗಳಿಗೆ ಆರ್ಡರ್ ಕೊಟ್ಟಿದ್ದೇವೆ. ಇನ್ನೊಂದು ತಿಂಗಳಲ್ಲಿ ಕಂಬಗಳು ಸರಬರಾಜು ಆಗುವುದಿದೆ. ಇನ್ನು ಸೈಟಿನ ವಿಚಾರದಲ್ಲಿ ಇನ್ನೂ ಜಾಗ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರ ವಿಚಾರದಲ್ಲಿ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಕಂಪ್ಲಿಂಟ್ ಆಗಿದೆ. ಜಾಗ ಬರತಕ್ಕ ಸ್ಥಿತಿಯಲ್ಲಿದೆ. ಆದ್ದರಿಂದ, ಆದಷ್ಟು ಬೇಗ ಒಂದೆರಡು ತಿಂಗಳಲ್ಲಿ ಕೆಲಸವನ್ನು ಪ್ರಾರಂಭ ಮಾಡಿ ೧೯೬೯-೭೦ರಲ್ಲಿ ಏನು ಭರವಸೆಯನ್ನು ಕೊಟ್ಟಿದ್ದೆವು. ಆ ಸಮಯಕ್ಕೆ ಮುಗಿಸತಕ್ಕ ಪ್ರಯತ್ನವನ್ನು ತೀವ್ರವಾಗಿ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ೬೬೩ರ ಬಗ್ಗೆ ಮಾನ್ಯ ಮಂತ್ರಿಗಳು ಕಾಲವಕಾಶ ಬೇಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಕೈಮಗ್ಗಗಳು

೧೬೨ (೬೫೦) ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಸಣ್ಣ ಪ್ರಮಾಣದ ಉದ್ಯಮಗಳು ಮತ್ತು ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕೈಮಗ್ಗಗಳಿವೆ ?

(ಆ) ಈ ಕೈಮಗ್ಗಗಳಿಂದ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ?

(ಇ) ಸರ್ಕಾರವು ದಕ್ಷಿಣ ಕನ್ನಡ ಜಿಲ್ಲಾ ನೇಕಾರರಿಗೆ ಯಾವ ಸವಲತ್ತುಗಳನ್ನು ನೀಡುತ್ತದೆ ?

(ಈ) ಸರ್ಕಾರವು ನೇಕಾರರ ಕುಟುಂಬಗಳ ಅಭಿವೃದ್ಧಿಗಾಗಿ ಹೊಸ ಯೋಜನೆಗಳನ್ನು ರೂಪಿಸಲು ಉದ್ದೇಶಿಸಿದೆಯೆ ? ಹಾಗಿದ್ದಲ್ಲಿ ಈ ಹೊಸ ಯೋಜನೆಗಳು ಯಾವುವು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಉದ್ಯಮಗಳು ಮತ್ತು ಗಣಿ ಮತ್ತು ಭೂವಿಜ್ಞಾನ ಸಚಿವರು).—

(ಅ) ೨೫೯೪ ಕೈಮಗ್ಗಗಳಿವೆ,

(ಆ) ದಕ್ಷಿಣ ಕನ್ನಡ ಕೈಮಗ್ಗ ನೇಕಾರರು ೨೪೪.೬೨ ಲಕ್ಷ ಮೀಟರ್‌ಗಳಷ್ಟು ಬಟ್ಟೆಯನ್ನು ಉತ್ಪಾದಿಸುತ್ತಿದ್ದಾರೆ, ಈ ಬಟ್ಟೆಯ ಮೌಲ್ಯ ಸುಮಾರು ರೂ. ೩೪.೫೫ ಲಕ್ಷ ಆಗುವುದು.

(ಇ) ರಾಜ್ಯದಲ್ಲಿ ನೇಕಾರರಿಗೆ ಕೊಡುತ್ತಿರುವ ಸೌಲಭ್ಯಗಳೆಲ್ಲವನ್ನೂ ಕೂಡ ಈ ಜಿಲ್ಲೆಯ ನೇಕಾರರಿಗೂ ಒದಗಿಸಲಾಗುತ್ತಿದೆ.

(ಈ) ಇಲ್ಲ.

ಶ್ರೀ ವಸಂತ ವಿ. ಸಾಲಿಯಾನ.—ಅಧ್ಯಕ್ಷರೆ, ಸರ್ಕಾರವು ದಕ್ಷಿಣ ಕನ್ನಡ ಜಿಲ್ಲಾ ನೇಕಾರರಿಗೆ ಯಾವ ಸವಲತ್ತುಗಳನ್ನು ನೀಡುತ್ತದೆ ಎಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ರಾಜ್ಯದಲ್ಲಿ ನೇಕಾರರಿಗೆ ಕೊಡುತ್ತಿರುವ ಸೌಲಭ್ಯಗಳೆಲ್ಲವನ್ನೂ ಕೂಡ ಈ ಜಿಲ್ಲೆಯ ನೇಕಾರರಿಗೂ ಒದಗಿಸಲಾಗುತ್ತಿದೆ ಎಂದು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ೨,೫೯೪ ಕೈಮಗ್ಗಗಳಿಗೆ ಸರ್ಕಾರದಿಂದ ಯಾವ ಯಾವ ಸವಲತ್ತುಗಳನ್ನು ಕೊಟ್ಟಿದ್ದೀರಾ ಎಂದು ತಿಳಿಸಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಈ ಕೆಳಕಂಡ ಸವಲತ್ತುಗಳನ್ನು ರಾಜ್ಯದ ಎಲ್ಲಾ ನೇಕಾರರಿಗೆ ಸಹಕಾರಿ ಸಂಘಗಳ ಮೂಲಕ ಒದಗಿಸಲಾಗುತ್ತಿದೆ.

೧. ಉತ್ಪಾದನೆಗಾಗಿ ಸಹಕಾರಿ ಸಂಘಗಳಿಗೆ ಕಡಿಮೆ ಬಡ್ಡಿದರದಲ್ಲಿ ನಬಾರ್ಡ್ ಹಣ ಒದಗಿಸುವುದು.

೨. ಕೈಮಗ್ಗ ಬಟ್ಟೆಗಳನ್ನು ಮಾರಾಟ ಮಾಡಲು ಸಹಾಯವಾಗುವಂತೆ ಶೇ. ೨೦ ರಷ್ಟು ವಿಶೇಷ ರಿಬೇಟನ್ನು ಕೊಡಲಾಗುತ್ತಿದೆ.

೩. ಮಗ್ಗಗಳನ್ನು ಆಧುನಿಕರಿಸಲು ಮೂರನೆಯ ಒಂದು ಭಾಗ ಸಹಾಯಧನವಾಗಿಯೂ ಮೂರನೆಯ ಎರಡು ಭಾಗದಷ್ಟು ಸಾಲವಾಗಿಯೂ ನೇಕಾರರಿಗೆ ಸಹಕಾರಿ ಸಂಘಗಳ ಮೂಲಕ ಈ ಸೌಲಭ್ಯವನ್ನು ಒದಗಿಸಲಾಗುತ್ತದೆ.

೪. ನೇಕಾರರಿಗೆ ವಸತಿ ಮತ್ತು ಕಾರ್ಯಕಾರಿ ಸೌಲಭ್ಯಕ್ಕಾಗಿ ಹಣದ ಸಹಾಯವನ್ನು ಕೊಡಲಾಗುತ್ತಿದೆ.

೫. ಮಿತವ್ಯಯ ನಿಧಿಯೋಜನೆಯಲ್ಲಿ ಸರಕಾರವು ಸಮ ಚಂದಾಹಣವನ್ನು ಕೊಡುತ್ತಿರುವುದು, ಇಷ್ಟು ಸೌಲಭ್ಯ ನೇಕಾರರಿಗೆ ಕೊಡುತ್ತಿದ್ದೇವೆ.

ಶ್ರೀ ವಸಂತ ವಿ. ಸಾಲಿಯಾನ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨,೫೯೪ ಕೈಮಗ್ಗಗಳನ್ನು ಚಲಾಯಿಸುವಂತಹವರ ಕುಟುಂಬಗಳ ಮಕ್ಕಳಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಟ್ರೈನಿಂಗ್ ಸೆಂಟರ್ ಸ್ಥಾಪನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಸರ್ಕಾರ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟು ಕೊಳ್ಳುತ್ತದೆ ಅಷ್ಟೆ.

ಶ್ರೀ ವಸಂತ ವಿ. ಸಾಲಿಯಾನ.—ಈಗ ಸಬ್ಸಿಡಿ ಏನು ಕೊಡುತ್ತಿದ್ದಾರೆ ಅದು ಸುಮಾರು ನಾಲ್ಕು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಕೈಮಗ್ಗದವರಿಗೆ ಸಿಗುತ್ತಿಲ್ಲ. ದಯವಿಟ್ಟು ಮಂತ್ರಿಗಳು ಆ ಬಗ್ಗೆ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ನಾವು ಸಬ್ಸಿಡಿ ಎಲ್ಲರಿಗೂ ಕೊಟ್ಟಿದ್ದೇವೆ, ಬಹುಶಃ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಅದು ಸಿಗದಿದ್ದರೆ, ಅದನ್ನು ಕೊಡಿಸುವಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.